**ಓ.ಎಸ್. ನಂ. 264/2015 ಪಿ.ಡಬ್ಲೂ-1 ಹೆಸರು - ಸಣ್ಣಮಾದೇಗೌಡ**

**ಸಾಕ್ಷಿಯನ್ನು ದಿನಾಂಕಃ 25/07/2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಎಂ.ಕೆ.ಬಿ ಪ್ರತಿವಾದಿ ಪರ ವಕೀಲರಿಂದಃ-**

ಸ.ನಂ.54/2 ರ 2 ಎಕರೆ 7 ಗುಂಟೆ ಚಿಕ್ಕಮಾದೇಗೌಡ ಮತ್ತು ದೊಡ್ಡಮಾದೇಗೌಡರ ಜಂಟಿ ಖಾತೆಯಲ್ಲಿ ಇತ್ತು ಎಂದರೆ ಸರಿ. ಅದೇ ರೀತಿ ಸ.ನಂ.49/2 ರ 3 ಎಕರೆ 27 ಗುಂಟೆ ಚಿಕ್ಕಮಾದೇಗೌಡ ಮತ್ತು ದೊಡ್ಡಮಾದೇಗೌಡರ ಜಂಟಿ ಖಾತೆಯಲ್ಲಿ ಇತ್ತು ಎಂದರೆ ಸರಿ. ಅದೇ ರೀತಿ ಸ.ನಂ.77/4 ಮತ್ತು 78/1 ಬಿ ಚಿಕ್ಕಮಾದೇಗೌಡ ಮತ್ತು ದೊಡ್ಡಮಾದೇಗೌಡರ ಜಂಟಿ ಖಾತೆಯಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸ.ನಂ.77 ರ ಪಹಣಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ನಿಪಿ-14 ಪಾಲು ಪಾರಿಕತ್ತ ನಲ್ಲಿ ನನ್ನ ತಂದೆ ಮತ್ತು ದೊಡ್ಡಪ್ಪನ ನಡುವೆ ಬೇರೆ ಆಸ್ತಿಗಳ ಬಗ್ಗೆ ವಿಭಾಗ ಆಗಿರುವ ಬಗ್ಗೆ ನಮೂದು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-14 ನಮ್ಮ ಕುಟುಂಬದ ಪಾಲು ಪಟ್ಟಿ ಅಲ್ಲ ಎಂದರೆ ಸರಿಯಲ್ಲ. ನಿಪಿ-14 ರಲ್ಲಿ ದೊಡ್ಡಮಾದೇಗೌಡರ ಆಸ್ತಿಗಳನ್ನು ಮಾತ್ರ ಸೇರಿಸಿ ಪತ್ರ ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಪಿ-14 ನೈಜ ದಾಖಲೆಯಾಗಿದ್ದ ಪಕ್ಷದಲ್ಲಿ ನನ್ನ ತಂದೆಗೆ ಸೇರಿದ ಎಲ್ಲಾ ಆಸ್ತಿಗಳನ್ನು ಸೇರಿಸಿ ಎಲ್ಲಾ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಲಾಗುತ್ತಿತ್ತು ಎಂದರೆ ಸರಿಯಲ್ಲ. ಸ.ನಂ.49/2 ರ 3 ಎಕರೆ 27 ಗುಂಟೆ ನನ್ನ ಹೆಸರಿಗೆ ಖಾತೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಕುಟುಂಬದಲ್ಲಿ ಆದ ವಿಭಾಗದ ಪ್ರಕಾರ ಐಟಂ ನಂ.1 ರ ಖಾತೆ ಪ್ರತಿವಾದಿಗೆ ಐಟಂ ನಂ.2 ರ ಖಾತೆ ನನ್ನ ಹೆಸರಿಗೆ ದಾಖಲಾಗಿದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.2 ರ ಖಾತೆ ಈಗಲೂ ನನ್ನ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು ಐಟಂ ನಂ.2 ರಲ್ಲಿ 2 ಎಕರೆ 20 ಗುಂಟೆ ಚಾನಲ್ ಗೆ ಹೊರಟು ಹೋಗಿದೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.2 ಕ್ಕೆ ದಿಃ26.11.2012 ರಂದು ನನ್ನ ತಂದೆಯಿಂದ ನನಗೆ ದಾನ ಪತ್ರ ಆಗಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಚಾನಲ್‌ಗೆ ಜಮೀನು ಸ್ವಾಧೀನವಾಗಿದೆ ಎಂದು ನುಡಿಯತ್ತಾರೆ. ದಾವಾ ಐಟಂ ನಂ.2 ರಲ್ಲಿ ಯಾವುದೇ ರೀತಿ ಭೂಸ್ವಾಧೀನವಾಗಿಲ್ಲ ಮತ್ತು ಭೂಸ್ವಾಧೀನವಾದ

ಜಮೀನಿಗೆ ದಾನ ಪತ್ರ ಬರೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದಾಗಿಯೇ ನಾನು ನಮ್ಮ ಕುಟುಂಬದ ವಿಭಾಗ ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ರ ಸ್ವತ್ತನ್ನು ಕಬಳಿಸುವ ಸಲುವಾಗಿ ಒಟ್ಟು ಕುಟುಂಬದ ಆಸ್ತಿಯನ್ನು ಮರೆಮಾಚಿದ್ದೇನೆ ಎಂದರೆ ಸರಿಯಲ್ಲ. ಇತರೆ ಆಸ್ತಿಗಳನ್ನು ದಾವಾ ದಲ್ಲಿ ಸೇರಿಸಿದರೆ ಸತ್ಯಾಂಶ ಹೊರಬರುತ್ತದೆ ಎಂದು ಸೇರಿಸಿಲ್ಲ ಎಂದರೆ ಸರಿಯಲ್ಲ. 1991 ರಿಂದ 1 ನೇ ಐಟಂ ನಲ್ಲಿ ಪ್ರತಿವಾದಿ ಮತ್ತು 2 ನೇ ಐಟಂ ನಲ್ಲಿ ನಾನು ಪ್ರತ್ಯೇಕವಾಗಿ ಸ್ವಾಧೀನದಲ್ಲಿದ್ದೇವೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ರಲ್ಲಿ ನಾನು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸಲು ನನಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ನಿಪಿ-14 ನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಂದೆ ಸೇರಿಕೊಂಡು ನಿಪಿ-14 ನ್ನು ಸೃಷ್ಟಿಸಿಕೊಂಡಿದ್ದೇವೆ ಮತ್ತು ಪ್ರತಿವಾದಿ ಅದಕ್ಕೆ ರುಜು ಮಾಡಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಓ**

ಸಹಿ/-

1 **ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**